1 ಪೂರ್ವಕ್ಕೆ ಮುನಕೆಟ್ಟ ಹರಾಜಿನೆಲ್ಲಿ ಪಡದ ಖಾಲೀ ಜ ಮಿನುಮತ್ತು ಸರಕಾರದ ಖಾಲೀ ಜಮಿನು ಸಹ.

1 ಪಶ್ಚಿಮಕ್ಕೆ ಕೋಟೇ ಪಳಕ್ಕೆ ಹೋಗುವದಾರಿ,

1 ಉತ್ತರಕ್ಕೆ ಹೊನ್ನಪ್ಪನ ಮನೆ.

1 ದಕ್ಷಿಣಕ್ಕೆ ಕೋಟೇವಳಕ್ಕೆ ಹೋಗುವ ದಾರಿ.

ಈ ಚತುರ್ಮಧ್ಯೆ ಇರುವ ಕಟ್ಟಿದ ಕಟ್ಟಡ ಅಂಕ್ಷಣ 65 ಮಧ್ಯೆ ತೊಟ್ಟ ಖಾಲೀ ಜಮಿನು ಅಂಕಣ 2 ಸಹ ಚಾಲತೀ ಇಸವೀ ಏಪ್ರೆಲ್ 7ನೇ ತಾರೀಖು ಸೋಮವಾರ ಹಗಲು 12 ಘಂಟೆ ಲಾಗಾಯತು 4 ಘಂಟೆ ವರವಿಗೂ ಸದರೀ ಕಟ್ಟಡದ ಬಳಿ ತಾಲ್ಲೂಕು ಆಫಿಸ ರವರಿಂದ ಹರಾಜು ಹಾಕಲ್ಪಡುತ್ತೆ. ಯಿಷ್ಟವುಳ್ಳ ಜನಗಳು ಸದರೀ ಟೈಮಿಗೆ ಸರಿಯಾಗಿ ಕಟ್ಟಡದ ಬಳಿ ಹಾಜರ್ ಯಿದ್ದು ಧಾರಾಳವಾಗಿ ಚಡ ಸವಾಲ್ ಮಾಡಬಹುದು. ಹರಾಜ್ ಖೈದಾದ ನಂತರ ಮತ್ತತಕ್ಕೆ ಸವಾಲ್‌ಗಳು ಅಂಗೀಕರಿಸುವದಿಲ್ಲ. ಹರಾಜಿನಲ್ಲಿ ಅಖೈರ್ ಸವಾಲ್ ನಿಂತ ದರಖಾಸ್ತುದಾರನು 4ರಲ್ಲಿ ಪೊಂದು ಹಿಸ್ಸೆ ಮೊಬಲಗು ತಕ್ಷಣ ಹಾಜರ್ ಮಾಡಿ ರೀತಿ ಪಡೆಯಬೇಕು. ಬಾಕೀ ಮೂರು ಹಿಸ್ಸೇ ಮೊಬಲಗಿಗೆ ಖಾತರ ಜಾಮೀನು ಕೊಡಬೇಕು. ಈ ಹರಾಜು ಮುಜರಿಯು ಡೆಪ್ಯೂಟಿ ಕಮ್ಮಿಷನ್ನರ್ ಸಾಹೆಬರವರು, ವ ದೀರ್ವಾ ಸಾಹೆಬರವರ ಮಂಜೂರಿಗೆ ವಳಪಟ್ಟದ್ದಾಗಿದೆ. ಮಂಜೂರಿ ಹುಕ್ಕುಂ ಬಂದ ಬಾಕೀ ಮೊಬಲಗಿಗೆ ತಗಾದೆ ಮಾಡಿದ ಪೊಡನೆಯೇ ಪೂರಾ ಮೊಬಲಗು ದರಖಾಸ್ತುದಾರನಾಗಲಿ ಜಾಮೀರ್ದಾರನಾಗಲಿ ಕೊಟ್ಟು ರೀದಿ ಪಡಿಯಬೇಕು. ಹಾಗೆ ಮೊಬಲಗು ಕೊಡದೆ ಯಿದ್ದರೆ ದುಸರಾ ಹರಾಜು ಆಗುವದರಲ್ಲಿ ಕಮ್ಮಿ ಬೀಳತಕ್ಕ ಮೊಬಲಗು ಅವ್ವಲ್ ದರಖಾಸ್ತುದಾರನು ಜಾಮೀನುದಾರನು ಸಹ ತೆರಬೇಕಾಗಿರುತ್ತೆ. ಈ ಮೊಬಲಗು ಇವರ ಚರ ಯಾ ಸ್ಥಿರಸ್ವತ್ತುಗಳ ಮೇಲೆ ವಿಲೇ ಮಾಡಲ್ಪಡುತ್ತೆ. ಶಿವಾಯಿ ಡಿಪಾಜಿಟ್ ಯಿಟ್ಟು ಯಿರುವ ಹಣವು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲಾಗೀತು.

ತಾರೀಖು 16ನೇ ಮಾರ್ಚೀ ಫಿಬ್ರವರೀ ಸ್ನ 1884.

ಡಿ. ಶಾಮರಾವ್,
ಅಮಲ್ದಾರ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶಿರಾ ತಾಲ್ಲೂಕು ಲಕ್ಕನಹಳ್ಳಿಲಿರುವ ಗುಜ್ಜಾರಪ್ಪನ ಮಗ ಕರೀತಿಮ್ಮನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ಕೇಸ್ ನಂಬರ್ 2.

ಹುಕ್ಕುಂ.

ಮೇಲ್ಕಂಡ ಕರೀತಿಮ್ಮನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ರೂಬರೂ ಅರ್ಜೀದಾರನಾದ ಕರೀತಿಮ್ಮನ ಪರವಾಗಿ ಅವನನ್ನು ಮತ್ತು ಸದರಿಯವನ ಲೇಣೇದಾರ್‌ರುದ ಸೋಮಲಿಂಗಂಣ 1, ಸಿದ್ದೇಗೌಡ 1, ಇವರ ತರಫ್ ಹಾಜರಾದ ಸಿದ್ದೇಗೌಡರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ತಿರಿಯಂಣನ ಮಗ ಸೋಮಲಿಂಗಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕರೀತಿಮ್ಮನು ಹೊಂದುವದಕ್ಕೆ ಹಕ್ಕುದಾರ ನಾಗುವದರ ಮೂಲಕ ದಿವಾಳೀ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕ್ರಂಡ ಯಾವ ಸಾಲಕ್ಕೂ ಲಿಸ್ಕ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸಾಲದ ಪಟ್ಟಿ.

ನಂಬರ್.	ಲೇವೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿತಿಯಿಂದ ಅವರಗಳ ವಾಸಸ್ಥಳ.	ಕೊಬಲಗು.	ಯಾವಾಗ ಡಿಕ್ರೀ ಆದದ್ದು.	ದೇನೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಕಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಸೋಮಲಿಂಗಂಣ	144–8–0	16ನೇ ನವಂಬರ್ 1883.	ಮದ್ದಗಿರಿ ಮುನ್ಸಿಫ್ ಕೋರ್ಟು 1880ನೇ ಇಸವಿ 190ನೇ ನಂಬರ್ ಡಿಕ್ರಿ.	
2	ಕಿರಾ ತಾಲ್ಲೂಕು ಹುಲಿಕುಂಟೇಲಿರುವ ಕಿದ್ದೇಗೌಡ	10–0–0	ಡಿಟೋ	ಸಾಲ ತಕ್ಕೊಂಡ ಬಗೆ.	

1884ನೇ ಇಸವಿ ಫಿಬ್ರುವರೀ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟಿತು.

ಸಿ. ಕೈಸ್,
ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್ರೀಯವರ ಕೋರ್ಟ್‌ನಲ್ಲಿ.

1884ನೇ, ಇಸವಿ ಅರ್ಜೀ ನಂಬರ್ 53.

ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹರಿಗಿರಿಗೋಸಾಯಿ, ಮೃತಪಟ್ಟ ಸದರೀ ಸೋಮೇಶ್ವರಗಿರಿಗೊಸಾಯಿಗೆ ಅಂಣ, ದರ್ಯಾವುಗಿರಿಗೋಸಾಯಿಗೆ ಸಿಷ್ಯ ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ಮಂಡಿಮೊಹಲ್ಲಾಸ್ಥಳದ ಹರಿಗಿರಿಗೋಸಾಯಿ ಸದರೀ ವಾಸಸ್ಥರಾಗಿ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರಿಗಿರಿಗೋಸಾಯಿ ಅರ್ಜಿಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟ್‌ನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಚಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರುವರೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 59.

ಮೃತಪಟ್ಟ ಕಿದ್ದಲಿಂಗೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳಾದ ನಂಜಮ್ಮ, ಮೃತಪಟ್ಟ ಸದರೀ ಕಿದ್ದಲಿಂಗೇಗೌಡನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹೆಗ್ಗಡದೇವನ ಕೋಟೆ ತಾಲ್ಲೂಕು ಗಿಂಣಾಪಳ್ಳಿ ಸ್ಥಳದ ಸದರೀ ನಂಜಮ್ಮನು, ಸದರೀ ವಾಸಸ್ಥನಾಗಿ ಮೃತಪಟ್ಟ ಕಿದ್ದಲಿಂಗೇಗೌಡನ ಜಿಂದಗೀ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಪ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ಲ್ಲು ಮೈಸೂರು